ದಿನಾಂಕ: 28-03-2023 ರಂದು ನಡೆದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 41ನೇ ಸಭೆಯ ನಡವಳಿಗಳು

:ಅಧ್ಯಕ್ಷತೆ:

**ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್**

**ಸನ್ಮಾನ್ಯ ಕಾರ್ಮಿಕ ಸಚಿವರು**

**ಹಾಗೂ**

**ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.**

ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಪ್ರತಿನಿಧಿ ಸದಸ್ಯರುಗಳು:

1. ಶ್ರೀ ಶಂಕರ್ ಸುಲೇಗಾವ್, ಅಧ್ಯಕ್ಷರು. ಭಾರತೀಯ ಮಜ್ದೂರ್ ಸಂಘ, ಬೆಂಗಳೂರು.
2. ಶ್ರೀ ನಾಗನಾಥ್, ಪ್ರಧಾನ ಕಾರ್ಯದರ್ಶಿ, ಹಿಂದ್ ಮಜ್ದೂರು ಸಂಘ, ಬೆಂಗಳೂರು
3. ಅಧ್ಯಕ್ಷರು, ಐಎನ್‌ಟಿಯುಸಿ, ಬೆಂಗಳೂರು ಇವರ ಪರವಾಗಿ ಶ್ರೀ ವೆಂಕಟೇಶ್ ವಿ. ಪ್ರಧಾನ ಕಾರ್ಯದರ್ಶಿಗಳು, ಐಎನ್‌ಟಿಯುಸಿ, ಬೆಂಗಳೂರು
4. ಶ್ರೀಮತಿ ಶಿವಾನಿ ಶಾಂತರಾಮ ಭಟ್ಕಳ, ರಾಜ್ಯ ಪ್ರತಿನಿಧಿ ಸದಸ್ಯರು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.

ಹಾಜರಿದ್ದ ಅಧಿಕಾರಿ ಅಥವಾ ಅವರ ನಾಮನಿರ್ದೇಶಿತ ಸದಸ್ಯರು:

1. ಡಾ॥ ಎನ್ ವಿ ಪ್ರಸಾದ್, ಭಾ.ಆ.ಸೇ, ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬೆಂಗಳೂರು--ಇವರ ಪರವಾಗಿ ಶ್ರೀ ಕೆ ಸಿ ದೇವರಾಜುಗೌಡ, ನಿರ್ದೇಶಕರು, ಅಡಳಿತ
3. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪರವಾಗಿ ಶ್ರೀ ದುಷ್ಯಂತ ರಾಜನಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕಲ್ಯಾಣ ಸುರಕ್ಷಾ ಭವನ, ಬೆಂಗಳೂರು

ಗೈರು ಹಾಜರಿದ್ದವರು:

1. ಅಧ್ಯಕ್ಷರು, CREDAI, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು
3. ಅಧ್ಯಕ್ಷರು, Construction Federation of India, New Delhi.
4. ಅಧ್ಯಕ್ಷರು, ಬಿಲ್ಡರ್ಸ್ ಅಸೋಷಿಯೇಷನ್ ಆಫ್ ಇಂಡಿಯಾ, ಬೆಂಗಳೂರು.
5. ಕಲ್ಯಾಣ ಆಯುಕ್ತರು, ಭಾರತ ಸರ್ಕಾರ, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಕಾರ್ಮಿಕ ಕಲ್ಯಾಣ ಸಂಸ್ಥೆ, ಬೆಂಗಳೂರು

ಮಂಡಳಿಯಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸನ್ಮಾನ್ಯ ಮಂಡಳಿಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರು ಇವರಿಗೆ ಹಾಗೂ ಸಭೆಯಲ್ಲಿ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು ಹಾಗೂ ಮಂಡಳಿಯ 41ನೇ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಮಂಡಳಿಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರನ್ನು ಕೋರಿಕೊಂಡರು.

ನಂತರ ಮಾನ್ಯ ಮಂಡಳಿಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರು ಮತ್ತು ಮಂಡಳಿಯ ಕಾರ್ಯದರ್ಶಿಯವರು ಮಂಡಳಿಯ ಎಲ್ಲಾ ಸದಸ್ಯರು/ಪ್ರತಿನಿಧಿಗಳಿಗೆ ಸ್ವಾಗತಿಸಿ ಶುಭಕೋರಿದರು.

ಮಂಡಳಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ದಿನಾಂಕ: 16-03-2023 ರಂದು ನಡೆದ 40 ನೇ ಮಂಡಳಿ ಸಭೆಯ ನಡವಳಿಗಳಿಗೆ ತೆಗೆದುಕೊಂಡ ಕ್ರಮದ ಕುರಿತು ಸಭೆಗೆ ಮಾಹಿತಿ ನೀಡಿದರು ಮತ್ತು ಅದನ್ನು ಸ್ಥಿರೀಕರಿಸಲು ಸಭೆಯನ್ನು ಕೋರಿದರು. ಹಾಜರಿದ್ದ ಮಂಡಳಿಯ ಸದಸ್ಯರೆಲ್ಲರ ಸಹಮತದೊಂದಿಗೆ ಮಂಡಳಿಯ 40ನೇ ಸಭೆಯ ನಡವಳಿಗಳಿಗೆ ಒಪ್ಪಿಗೆ ಸೂಚಿಸಿ ನಡವಳಿಗಳನ್ನು ಸ್ಥಿರೀಕರಿಸಲಾಯಿತು.

**ವಿಷಯ ಸಂಖ್ಯೆ-02**

**ನೋಂದಾಯಿತರಲ್ಲದ 4 ಕಟ್ಟಡ ಕಾರ್ಮಿಕರು ಕಟ್ಟಡ ಕಾಮಗಾರಿ ಸ್ಥಳಗಳಲ್ಲಿ ಮೃತ ಪಟ್ಟಿದ್ದು, ಇವರ ಅವಲಂಬಿತರಿಗೆ ಅಪಘಾತ ಮರಣ ಪರಿಹಾರ ಸಹಾಯ ಧನ ಒದಗಿಸುವ ಕುರಿತು.**

ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರ ಒದಗಿಸುವ ಸಂಬಂಧ ಕಾಯ್ದೆ ಮತ್ತು ನಿಯಮಗಳಡಿ ಪ್ರಸ್ತುತ ಯಾವುದೇ ಪ್ರಾವಧಾನಗಳು ಮತ್ತು ನಿಯಮಗಳು ಇರುವುದಿಲ್ಲ. ಆದರೆ, ಈ ಹಿಂದೆ ಇಂತಹ ಪ್ರಕರಣಗಳಲ್ಲಿ ತಲಾ ರೂ. 2.00 ಲಕ್ಷಗಳ ಪರಿಹಾರವನ್ನು ಅವರ ಅವಲಂಬಿತರಿಗೆ ನೀಡಲು ಮಾನವೀಯತೆ ದೃಷ್ಟಿಯಿಂದ ಮಂಡಳಿಯ ಅಧ್ಯಕ್ಷರು ಹಾಗೂ ಮಾನ್ಯ ಕಾರ್ಮಿಕ ಸಚಿವರು ಸದರಿ ಪ್ರಕರಣಗಳಿಗೆ ಅನುಮೋದನೆ ನೀಡಿರುತ್ತಾರೆ. ಪ್ರಸ್ತುತ ನೋಂದಾಯಿತರಲ್ಲದ ಮೂರು ಕಟ್ಟಡ ಕಾರ್ಮಿಕರ ಅವಲಂಬಿತರಿಗೆ ಅಪಘಾತ ಮರಣ ಪರಿಹಾರ ಕೋರಿ ಕಾರ್ಮಿಕ ಅಧಿಕಾರಿಗಳು, ಉಪವಿಭಾಗ -2, ಮಂಗಳೂರು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು, 4ನೇ ವೃತ್ತ, ಮಂಗಳೂರು ಇವರಿಂದ ಪ್ರಸ್ತಾವನೆ ಸ್ವೀಕೃತಗೊಂಡಿದ್ದು, ಈ ಕೆಳಕಂಡ ನಾಲ್ಕು ಪ್ರಕರಣಗಳಲ್ಲಿ ಪರಿಹಾರ ಧನ ಸಹಾಯ ಮಂಜೂರು ಮಾಡಲು ಸಭೆಗೆ ಮಂಡಿಸಿದೆ.

**<u>ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಪ್ರಕರಣಗಳ ಪಟ್ಟಿ</u>**

| ಕ್ರ. ಸಂ | ತನಿಖಾ ವರದಿ ಸಲ್ಲಿಸಿದ ಅಧಿಕಾರಿ | ಕಡತ ಸಂಖ್ಯೆ | ವಿಷಯ | ಮೃತಪಟ್ಟ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಹೆಸರು |
|---|---|---|---|---|
| 1 | ಕಾರ್ಮಿಕ ಅಧಿಕಾರಿ ಉಪ ವಿಭಾಗ-02 ಮಂಗಳೂರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್ -34/2022-23 | ದಿನಾಂಕ:25-03-2023 ರಂದು ಸುಳ್ಯ ತಾಲ್ಲೂಕು ಸುಳ್ಯ ಕಸಬಾ ಗ್ರಾಮದ ಗುರುಂಪು ಎಂಬಲ್ಲಿರುವ ಅಬೂಬಕ್ಕರ್ ಎಂಬುವರ ಮನೆ ನಿರ್ಮಾಣ ಸಂದರ್ಭದಲ್ಲಿ ಮನೆಯ ಹಿಂಬದಿಯ ತಡೆಗೋಡೆ ಕೆಲಸ ನಿರ್ವಹಿಸುತ್ತಿದ್ದಾಗ ಮಣ್ಣಿನ ಬರೆ ಕುಸಿದು ಕೆಲಸ ನಿರ್ವಹಿಸುತ್ತಿದ್ದ ಶ್ರೀ. ಸೋಮಶೇಖರ್ ರೆಡ್ಡಿ, ಶ್ರೀಮತಿ ಶಾಂತವ್ವ | 1. ಶ್ರೀ ಸೋಮಶೇಖರ್ ಕಳಸದ, (ಗದಗ)<br>2.ಶ್ರೀಮತಿ ಶಾಂತ ಸೋಮಶೇಖರ್ ಕಳಸದ, (ಗದಗ) |

| | | | | |
|---|---|---|---|---|
| | | | ಮತ್ತು ಶ್ರೀ ಚಂದ್ರಪ್ಪ ಇವರು ಮಣ್ಣಿನ ಅಡಿಯಲ್ಲಿ ಸಿಲುಕಿಕೊಂಡು ಮೃತಪಟ್ಟಿರುತ್ತಾರೆ. | 3.ಶ್ರೀ ಚಂದ್ರಶೇಖರ್ ಕಳಸಪುರ್, (ಗದಗ) |
| 2 | ಹಿರಿಯ ಕಾರ್ಮಿಕ ನಿರೀಕ್ಷಕರು, 4ನೇ ವೃತ್ತ, ಮಂಗಳೂರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್ -35/2022-23 | ದಿನಾಂಕ:26-01-2023ರಂದು ಮಂಗಳೂರು ತಾಲೂಕಿನ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿರುವ ಅಶೋಕ್ ಲೈಲ್ಯಾಂಡ್ ವಾಹನ ರಿಪೇರಿಯ ವರ್ಕ್‌ಶಾಪ್‌ನ ಮೇಲ್ಛಾವಣಿಯ ಶೀಟ್ ಮೇಲೆ ಸೋಲಾರ್ ಪ್ಯಾನಲ್‌ಗೆ ವೈರಿಂಗ್ ಮತ್ತು ಪ್ಲಂಬಿಂಗ್ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಮೇಲಿಂದ ಬಿದ್ದು ತಲೆಗೆ ಗಂಭೀರವಾಗಿ ಗಾಯವಾಗಿ ರಕ್ತಸ್ರಾವದಿಂದ ಮೃತಪಟ್ಟಿರುತ್ತಾರೆ. | ಶ್ರೀ ವರುಣ್ ಕುಮಾರ್, ಮಂಗಳೂರು |

**ತೀರ್ಮಾನ: ಈ ಕುರಿತು ಸವಿವರವಾಗಿ ಚರ್ಚಿಸಿ ಕಟ್ಟಡ ಕಾರ್ಮಿಕರ ಹಿತರಕ್ಷಣೆಯು ಮಂಡಳಿಯ ಜವಾಬ್ದಾರಿಯೆಂದು ಮೇಲ್ಕಂಡ ಮೃತ ಕಾರ್ಮಿಕರ ಅವಲಂಬಿತರಿಗೆ ನೋಂದಾಯಿತರಲ್ಲದ ಕಾರ್ಮಿಕರ ಅಪಘಾತ ಮರಣ ಪರಿಹಾರವಾಗಿ ತಲಾ ರೂ.2 ಲಕ್ಷ ಮೊತ್ತದಂತೆ ಪರಿಹಾರ ಮಂಜೂರು ಮಾಡಲು ಸಭೆಯು ಸುದೀರ್ಘವಾಗಿ ಚರ್ಚಿಸಿ ಸರ್ವಾನುಮತದಿಂದ ಅನುಮೋದಿಸಿತು.**

## ವಿಷಯ ಸಂಖ್ಯೆ: 03

**ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) (ಕರ್ನಾಟಕ) ನಿಯಮಗಳು, 2006 ರ ನಿಯಮ 49 (ಸಿ) ರಲ್ಲಿ 2ನೇ ಅಂಶವಾದ ದುರ್ಬಲತೆ ಪಿಂಚಣಿಯನ್ನು ಪಡೆಯಲು ನಿಗಧಿಪಡಿಸಿರುವ 6 ತಿಂಗಳ ಕಾಲಮಿತಿಯನ್ನು ಸಡಿಲಗೊಳಿಸಿ, ಒಂದು ವರ್ಷಕ್ಕೆ ವಿಸ್ತರಿಸುವ ಬಗ್ಗೆ.**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) (ಕರ್ನಾಟಕ) ನಿಯಮಗಳು, 2006 ರನಿಯಮ 49 (ಸಿ) ರಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ನಿಯಮ 40 ರಲ್ಲಿ ನೀಡುವ ದುರ್ಬಲತೆ ಪಿಂಚಣಿಗಾಗಿ ಅರ್ಜಿಯನ್ನು ಸಲ್ಲಿಸಲು ಪ್ರಸ್ತುತ 06 ತಿಂಗಳ ಕಾಲಾವಧಿಯನ್ನು ನಿಗಧಿಪಡಿಸಲಾಗಿರುತ್ತದೆ. ಈಗಾಗಲೇ ನಿಯಮ 39 ರಲ್ಲಿ ನೀಡಲಾಗುವ ಪಿಂಚಣಿಗಾಗಿ ಅರ್ಜಿಯನ್ನು ಸಲ್ಲಿಸಲು ಕಾಲಮಿತಿಯನ್ನು ಒಂದು ವರ್ಷಕ್ಕೆ ವಿಸ್ತರಿಸಲು ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡಲು ಮಂಡಳಿಯ 40 ನೇ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಇದಲ್ಲದೇ, ದುರ್ಬಲತೆ ಪಿಂಚಣಿಗಾಗಿ ಅರ್ಜಿ ಸಲ್ಲಿಸುವ ಫಲಾನುಭವಿಗಳು ಧೀರ್ಘಕಾಲ ಚಿಕಿತ್ಸೆ ಪಡೆಯುತ್ತಿರುವ ಸಂಭವಗಳು ಹೆಚ್ಚಾಗಿರುತ್ತದೆ. ಅಂಗ ನ್ಯೂನ್ಯತೆಯಿಂದ ಅವರಿಗೆ ಸಕಾಲದಲ್ಲಿ ಅಂದರೆ 06 ತಿಂಗಳ ಒಳಗಾಗಿ ಅರ್ಜಿ ಸಲ್ಲಿಸಲು ತೊಂದರೆ ಉಂಟಾಗುತ್ತಿದೆ. ಈ ಹಿನ್ನಲೆಯಲ್ಲಿ ಇಂತಹ ಪ್ರಕರಣಗಳಲ್ಲಿ ಕೂಡ 49 (ಸಿ) ರಲ್ಲಿ ನಿಗಧಿಪಡಿಸುವ 06 ತಿಂಗಳ ಕಾಲಮಿತಿಯನ್ನು ಒಂದು ವರ್ಷಕ್ಕೆ ವಿಸ್ತರಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು, ಈ ವಿಷಯವನ್ನು ಮಂಡಳಿಯ ಅನುಮೋದನೆಗೆ ಮಂಡಿಸಿದೆ.

**ತೀರ್ಮಾನ: ಸದರಿ ವಿಷಯದ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.**

## ವಿಷಯ ಸಂಖ್ಯೆ: 4

**2023-2024 ನೇ ಸಾಲಿನಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಕೇಂದ್ರ ಲೋಕಸೇವಾ ಆಯೋಗ ಮತ್ತು ರಾಜ್ಯ ಲೋಕಸೇವಾ ಆಯೋಗ ಹಾಗೂ ಇತರೆ ಸರ್ಕಾರಿ ಸಂಸ್ಥೆಗಳು ವಿವಿಧ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಆಯ್ದ ಏಜೆನ್ಸಿಗಳ ಮೂಲಕ ತರಬೇತಿ ನೀಡಲು ಗುರಿ ನಿಗಧಿ ಪಡಿಸುವ ಬಗ್ಗೆ.**

ಮಂಡಳಿಯ ನೋಂದಾಯಿತ ಕಾರ್ಮಿಕರ ಮಕ್ಕಳಿಗೆ ಶ್ರಮಸಂಸಾರ ಸಾಮರ್ಥ್ಯ ಯೋಜನೆಯಡಿ 2021-22ನೇ ಸಾಲಿನಲ್ಲಿ ಒಟ್ಟು 750 ಅಭ್ಯರ್ಥಿಗಳಿಗೆ ಯುಪಿಎಸ್‌ಸಿ/ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಈಗಾಗಲೇ ಬೆಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡದಲ್ಲಿ ತರಬೇತಿ ನೀಡಲಾಗಿರುತ್ತದೆ.

ಪ್ರಸ್ತುತ 2023-24ನೇ ಸಾಲಿನಲ್ಲಿ ಪುನಃ ಅರ್ಹ ಅಭ್ಯರ್ಥಿಗಳಿಗೆ ಯುಪಿಎಸ್‌ಸಿ/ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ತರಬೇತಿ ನೀಡಲು ಅರ್ಹ ಸಂಸ್ಥೆಗಳ ಆಯ್ಕೆಗಾಗಿ ಇ-ಟೆಂಡರ್ ಕರೆದಿದ್ದು, ಆಯ್ಕೆ ಕಾರ್ಯ ಪ್ರಗತಿಯಲ್ಲಿರುತ್ತದೆ. 2023-24ನೇ ಮಂಡಳಿಯ ಆಯವ್ಯಯದಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ಒಟ್ಟು 25.00 ಕೋಟಿಗಳ ಮೊತ್ತವನ್ನು ಮೀಸಲಿಟ್ಟು ಮಂಡಳಿ ಸಭೆ ಮತ್ತು ಸರ್ಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ.

ಹಾಗಾಗಿ, ಪ್ರಸಕ್ತ ಸಾಲಿಗೆ ಅಭ್ಯರ್ಥಿಗಳ ಸಂಖ್ಯೆಯನ್ನು ನಿಗಧಿಪಡಿಸಲು ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ: ವಿವಿಧ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗಳಿಗೆ ಗುರಿ ನಿಗಧಿಪಡಿಸುವ ಕುರಿತು ಮಾನ್ಯ ಅಧ್ಯಕ್ಷರಿಗೆ ಅಧಿಕಾರ ನೀಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ:೦೫

**ಮಾನ್ಯ ಅಧ್ಯಕ್ಷರ ಅನುಮೋದನೆಯ ಮೇರೆಗೆ ಇತರೆ ವಿಷಯಗಳ ಚರ್ಚೆ**

- **ಮಂಡಳಿಯಲ್ಲಿ ತುರ್ತು ಅವಶ್ಯಕತೆಗಳಿಗಾಗಿ ಮೂರು Pooled ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ**

  ಮಂಡಳಿಯ ವತಿಯಿಂದ ರಾಜ್ಯದದ್ಯಾಂತ ಹಾಗೂ ಬೆಂಗಳೂರಿನಲ್ಲಿ ಹಲವಾರು ಯೋಜನೆಗಳನ್ನು ಅನುಷ್ಠಾಗೊಳಿಸಲಾಗುತ್ತಿದೆ. ಈ ಯೋಜನೆಗಳು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಮಂಡಳಿಯ ಅಧಿಕಾರಿಗಳು, ನಿರೀಕ್ಷಕರು ಹಾಗೂ ಕೆಲವು ಸಿಬ್ಬಂಧಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಹಾಗೂ ಮೇಲುಸ್ತುವಾರಿ ನಡೆಸಬೇಕಾಗಿರುತ್ತದೆ. ಮಂಡಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕ ನಿರೀಕ್ಷಕರನ್ನು ಯೋಜನೆ ಅನುಷ್ಠಾನಗೊಳ್ಳುತ್ತಿರುವ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ವರದಿ ಸಲ್ಲಿಸಲು ಆಗ್ಗಿಂದಾಗೆ ನಿಯೋಜಿಸಲಾಗುತ್ತಿದೆ. ಈ ಎಲ್ಲಾ ಕರ್ತವ್ಯಗಳನ್ನು ಸಕಾಲದಲ್ಲಿ ನಿರ್ವಹಿಸಬೇಕಾದ್ದಲ್ಲಿ ಅವರಿಗೆ ವಾಹನ ವ್ಯವಸ್ಥೆಯನ್ನು ಒದಗಿಸುವುದು ಸೂಕ್ತವಾಗಿರುತ್ತದೆ. ಪ್ರಸ್ತುತ ಮಂಡಳಿಯಲ್ಲಿ ವಾಹನದ ವ್ಯವಸ್ಥೆಯವನ್ನು ಕಾರ್ಮಿಕ ಅಧಿಕಾರಿಗಳು ಮತ್ತು ಅವರಿಗಿಂತ ಹಿರಿಯ ಅಧಿಕಾರಿಗಳಿಗೆ ಮಾತ್ರ ನೀಡಲಾಗುತ್ತಿದೆ. ಆದುದರಿಂದ ಮಂಡಳಿಯಲ್ಲಿ ಮೂರು ವಾಹನಗಳನ್ನು ಬಾಡಿಗೆಗೆ ಪಡೆದು ಮೀಸಲಿರಿಸಿದ್ದಲ್ಲಿ ಕಛೇರಿಯ ಕೆಲಸಗಳಿಗಾಗಿ / ಪರಿಶೀಲನೆಗಾಗಿ ನಿರೀಕ್ಷಕರು ಹಾಗೂ ಸಿಬ್ಬಂಧಿಗಳು

ಕಛೇರಿಯಿಂದ ಹೊರಗೆ ಹೊಗ ಬೇಕಾದ್ದಲ್ಲಿ ಅವರಿಗೆ ಅನುಕೂಲವಾಗುತ್ತದೆ. ಈ ಕಾರಣಕ್ಕಾಗಿ ಹೆಚ್ಚಿನ ಕಾರ್ಯಪ್ರಗತಿ ಸಾಧಿಸಲು ಅನುವಾಗುವಂತೆ ಮಂಡಳಿಗೆ ಮೂರು ವಾಹನಗಳ ಅವಶ್ಯಕತೆ ಇರುತ್ತದೆ. ಆದ ಕಾರಣ ಮಂಡಳಿಯ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅನುಕೂಲವಾಗುವಂತೆ ಹಾಗೂ Pooling ಆಧಾರದ ಮೇಲೆ ಏಳು ಹಿರಿಯ ಕಾರ್ಮಿಕ ನಿರೀಕ್ಷಕರುಗಳು ಹಾಗೂ ಸಿಬ್ಬಂಧಿಗಳು ಉಪಯೋಗಿಸಲು ಮೂರು ವಾಹನಗಳ ಸೌಲಭ್ಯವನ್ನು ಒದಗಿಸುವ ಕುರಿತು ಸಭೆಯ ಅನುಮೋದನೆಗೆ ಮಂಡಿಸಿದೆ.

**ತೀರ್ಮಾನ:-ಸದರಿ ವಿಷಯದ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ಸರ್ವಾನುಮತದಿಂದ ಮೂರು ವಾಹನಗಳನ್ನು ಬಾಡಿಗೆ ಆದಾರದ ಮೇಲೆ ಪಡೆಯಲು ಅನುಮೋದನೆ ನೀಡಲಾಯಿತು.**

- **ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ಪಟ್ಟಣದಲ್ಲಿ ಸಮುದಾಯ ಭವನ ನಿರ್ಮಿಸುವ ಕಾಮಗಾರಿಯ ವ್ಯತ್ಯಾಸದ ಪರಿಮಾಣಗಳ ಪರಿಷ್ಕೃತ ಅಂದಾಜಿಗೆ ಅನುಮೋದನೆ ನೀಡುವ ಕುರಿತು.**

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನ ಮುಳಗನಕೊಪ್ಪ ಗ್ರಾಮದ ಸರ್ವೆ ನಂ.07 ರಲ್ಲಿ ಒಟ್ಟು ಕ್ಷೇತ್ರ 447-32-0 ರ ಪೈಕಿ 2-0-0 ಎಕರೆ ಜಮೀನಿನಲ್ಲಿ ಕಾರ್ಮಿಕ ಸಮುದಾಯ ಭವನವನ್ನು ನಿರ್ಮಿಸಲು ದಿನಾಂಕ:01-07-2021 ರಂದು ನಡೆದ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ 91ನೇ ಸಭೆಯಲ್ಲಿ ಒಟ್ಟು ರೂ.7.74 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ನಿರ್ಣಯಿಸಿದಂತೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಕಾರ್ಮಿಕ ಕಲ್ಯಾಣ ಆಯುಕ್ತರು ಇವರ ಪತ್ರ ದಿನಾಂಕ:28-12-2021 ರಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ತಾಂತ್ರಿಕ ಸಮಿತಿಯಿಂದ ಅನುಮೋದನೆ ಪಡೆದು ಟೆಂಡರ್ ಕರೆದು ಅನುಷ್ಠಾನಗೊಳಿಸಲು ಈ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಯವರಿಗೆ ಕೋರಿರುತ್ತಾರೆ. ಸದರಿ ಕಾರ್ಮಿಕ ಸಮುದಾಯ ಭವನವು 750 ರಿಂದ 1000 ಜನ ಕೂರುವಂತಹ ಸಾಮಾರ್ಥ್ಯ ಹೊಂದಿರುತ್ತದೆ ಹಾಗೂ ಸದರಿ ಕಾರ್ಮಿಕ ಸಮುದಾಯ ಭವನದಿಂದ ಕಾರ್ಮಿಕರಿಗೆ ಮತ್ತು ಇವರ ಅವಲಂಭಿತರಿಗೆ ಮದುವೆ ಮತ್ತು ಇತರೆ ಸಮಾರಂಭಗಳಿಗೆ ಹಾಗೂ ವೃತ್ತಿ ಸಂಭಂದ ಕೌಶಾಲ್ಯಾಭಿವೃದ್ಧಿ ತರಬೇತಿಯನ್ನು ನೀಡಲು ಮತ್ತು ಮುಂಡಗೋಡ ತಾಲ್ಲೂಕಿನ ಇತರೆ ಸಾರ್ವಜನಿಕರಿಗೂ ಸಹ ಅನುಕೂಲವಾಗಲಿದೆ . ದಿ:03-02-2022 ರಂದು ನಡೆದ ಮಂಡಳಿಯ 35ನೇ ಸಭೆಯ ನಿರ್ಣಯದಲ್ಲಿ ತಿಳಿಸಿದಂತೆ "ಕಲ್ಯಾಣ ಆಯುಕ್ತರು, ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ನಿರ್ವಹಿಸುವ ಕಾಮಗಾರಿಗಳ ಕುರಿತಾಗಿ ತಾಂತ್ರಿಕ ಸಿಬ್ಬಂಧಿ ವಿಭಾಗದ ಕೊರತೆಯಿರುವುದರಿಂದ ಕಾರ್ಮಿಕ ಕಲ್ಯಾಣ ಮಂಡಳಿಯ ತೀರ್ಮಾನದಂತೆ ಕೆಬಿಒಸಿಡಬ್ಲ್ಯೂಡಬ್ಲ್ಯೂಬಿ ಮಂಡಳಿಯ ವತಿಯಿಂದ ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಕರೆದು ಅರ್ಹ ಸಂಸ್ಥೆಗಳಿಗೆ ಕಾರ್ಯಾದೇಶ ನೀಡಿ ಕಾಮಗಾರಿ ಮುಕ್ತಾಯಗೊಳ್ಳುವವರೆಗೂ ತಾಂತ್ರಿಕ ಸಲಹೆ ಹಾಗೂ ಅನುಷ್ಠಾನಗೊಳಿಸುವಂತೆ ಸಬೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ".

ಅದರಂತೆ ಮಂಡಳಿಯಿಂದ ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಕರೆದು ಗುತ್ತಿಗೆದಾರರಾದ ಶ್ರೀ.ವಿ.ಬಿ. ಪ್ರಸಾದ್ ರೆಡ್ಡಿ , ಬೆಂಗಳೂರು ರವರಿಗೆ ದಿನಾಂಕ:18-04-2022 ರಂದು ಕಾರ್ಯಾದೇಶ ನೀಡಲಾಗಿರುತ್ತದೆ. ದಿನಾಂಕ: 20/07/2022 ರಂದು ಸ್ಥಳ ಹಸ್ತಾಂತರ ನೀಡಿಲಾಗಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಸದರಿ ಕಾಮಗಾರಿಯ Mark out ನೀಡುವ ಸಮಯದಲ್ಲಿ ಸ್ಥಳ ಬದಲಾವಣೆಯಾಗಿರುವುದರಿಂದ, PMC ಸಂಸ್ಥೆಯವರಾದ M/S NS CONSULTING ENGINEERS, BANGALORE ರವರು ದಿನಾಂಕ:01-08-2022

ರ ಪತ್ರದಲ್ಲಿ ಸದರಿ ಕಾಮಗಾರಿ ಸ್ಥಳದಲ್ಲಿ ಲಭ್ಯವಿರುವ ಮಣ್ಣಿನ ಗುಣಧರ್ಮ . ಎಸ್.ಬಿ.ಸಿ ಪರೀಕ್ಷೆ ನಡೆಸಲಾಗಿದ್ದು As there is Variation in sub soil strata , there is BC soil upto 3.00 m Depth and Net pressure obtained was 15 Tonne/$m^2$ but in the DPR it was considered 20 Tonne/$m^2$ , Hence Geo-Technical team Suggested/Recommended for Mass earthwork excavation and provide soling for stability of soil geological investigation report and due to this structure has redesigned by considering the new SBC of soil 15 Tonne/$m^2$ and the Revised structural drawings are submitted for the approval , because of this quantities in the earthwork excavation , concrete quantities and steel quantities etc ಎಂಬುದಾಗಿ ವರದಿಯನ್ನು ಸಲ್ಲಿಸಿರುತ್ತಾರೆ. ಅದರಂತೆ 05-08-2022 ರಂದು ಮಂಡಳಿಯ ತಾಂತ್ರಿಕ ಸಿಬ್ಬಂದಿಯು ಸ್ಥಳ ಪರಿಶೀಲಿಸಲಾಗಿದ್ದು PMC ಸಂಸ್ಥೆಯವರು ಸಲ್ಲಸಿರುವ ವರದಿಯಂತೆ ಸ್ಥಳಕ್ಕನುಗುಣವಾಗಿ ನಿರ್ಮಿಸುವುದು ಅವಶ್ಯವಿದೆ ಎಂದು ವರದಿ ನೀಡಿರುತ್ತಾರೆ ಹಾಗೂ PMC ಸಂಸ್ಥೆಯವರು ಸದರಿ ಕಾಮಗಾರಿ ಸ್ಥಳದಲ್ಲಿ ಲಭ್ಯವಿರುವ ಮಣ್ಣಿನ ಗುಣಧರ್ಮ ,ಎಸ್.ಬಿ.ಸಿ ಗೆ ಅನುಗುಣವಾಗಿ ತಯಾರಿಸಿ ಸಲ್ಲಿಸಿರುವ ಸ್ಟ್ರಕ್ಚರಲ್ ವಿನ್ಯಾಸಗಳನ್ನು ಪರಿಶೀಲಿಸಲಾಗಿರುತ್ತದೆ ಅದರಂತೆ ಗುತ್ತಿಗೆದಾರರು ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಇದರಿಂದ ಟೆಂಡರ್ ಕರಾರಿನಲ್ಲಿರುವ BOQ ಪರಿಮಾಣಗಳು ಹೆಚ್ಚುವರಿಯಾಗುತ್ತಿದ್ದು ಹಾಗೂ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 447 ವೆಚ್ಚ-12/2022 ದಿನಾಂಕ:30-07-2022 ರನ್ವಯ ಗುತ್ತಿಗೆದಾರರಿಗೆ ಜಿಎಸ್‌ಟಿ 18% ಪಾವತಿಸಬೇಕಾಗಿರುವುದರಿಂದ ಕಾಮಗಾರಿಯ ವೆಚ್ಚವು ಅನುಮೋದಿತ ಮೊತ್ತಕ್ಕಿಂತ ರೂ. 99.26 ಲಕ್ಷಗಳು ಹೆಚ್ಚುವರಿಯಾಗುತ್ತಿರುವ ಕಾರಣ ಸದರಿ ಪರಿಷ್ಕೃತ ಅಂದಾಜು ಮೊತ್ತ ರೂ.873.26 ಲಕ್ಷಗಳನ್ನು (**ಕೋಷ್ಟಕದಂತೆ**) ಮೀರದಂತೆ ಕಾಮಗಾರಿ ನಿರ್ವಹಿಸಲು ಅನುಮೋದನೆ ನೀಡುವ ಕುರಿತು ಹಾಗೂ ಹೆಚ್ಚುವರಿ ಮೊತ್ತವನ್ನು ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ಅನುದಾನವನ್ನು ಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸುವ ಕುರಿತು ಸಭೆಯ ಅವಗಾಹನೆಗೆ ಹಾಗೂ ಸಭೆಯ ನಿರ್ಣಯಕ್ಕೆ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ಕೋಷ್ಟಕ**

| | ವಿವರಗಳು | ಅನುಮೋದಿತ ಅಂದಾಜು ಮೊತ್ತ ರೂ. ಗಳಲ್ಲಿ | ಪರಿಷ್ಕೃತ ಅಂದಾಜು ಮೊತ್ತ ರೂ. ಗಳಲ್ಲಿ |
|---|---|---|---|
| 1 | ESTIMATION - COST OF CIVIL WORK | 653,40,703.00 | 7,30,85,113.04 |
| 2 | CONTRACTOR GST | (12%) 78,40,884.00 | (18%) 1,31,55,320.35 |
| 3 | THIRD PARTY 0.62% | 6,32,757 | 4,53,127.70 |
| 4 | DPR0.86% | 6,32,757 | 6,32,757.47 |
| 5 | CONTINGENCIES AND MISCELLANEOUS CHARGES | 29,52,899.00 | - |
| 6 | Total Amount in Rs, | 774,00,000.00 | 8,73,26,319.00 |

**ನಿರ್ಣಯ:** ಈ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿದಂತೆ, ಸದರಿ ಕಾರ್ಮಿಕ ಸಮುದಾಯ ಭವನದಿಂದ ಕಾರ್ಮಿಕರಿಗೆ ಮತ್ತು ಇವರ ಅವಲಂಭಿತರಿಗೆ ಮದುವೆ ಮತ್ತು ಇತರೆ ಸಮಾರಂಭಗಳಿಗೆ ಹಾಗೂ ವೃತ್ತಿ ಸಂಭಂದ ಕೌಶಾಲ್ಯಾಭಿವೃದ್ಧಿ ತರಭೇತಿಯನ್ನು ನೀಡಲು ಅನುಕೂಲವಾಗಲಿರುವ ಹಿತದೃಷ್ಟಿಯಿಂದ ಸದರಿ ಸಮುದಾಯ ಭವನವನ್ನು ಪೂರ್ಣಗೊಳಿಸುವುದು ಅತ್ಯವಶ್ಯವಿರುವುದರಿಂದ, ಮಂಡಳಿಯ ವಿವರವಾದ ತಾಂತ್ರಿಕ ವರದಿಯಂತೆ ಕಾಮಗಾರಿಯ ವೆಚ್ಚವು ಅನುಮೋದಿತ ಮೊತ್ತಕ್ಕಿಂತ ರೂ. 99.26 ಲಕ್ಷಗಳು ಹೆಚ್ಚುವರಿಯಾಗುತ್ತಿದ್ದು, ಪರಿಷ್ಕೃತ ಅಂದಾಜು ಮೊತ್ತ ರೂ.873.26 ಲಕ್ಷಗಳನ್ನು ಮೀರದಂತೆ ಕಾಮಗಾರಿ ನಿರ್ವಹಿಸಲು ಅನುಮೋದನೆ ನೀಡಿ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು ಹಾಗೂ ಹೆಚ್ಚುವರಿ ಮೊತ್ತವನ್ನು ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ಅನುದಾನವನ್ನು ಪಡೆದುಕೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

- **ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಪಟ್ಟಣದಲ್ಲಿ ಸಮುದಾಯ ಭವನ ನಿರ್ಮಿಸುವ ಕಾಮಗಾರಿಯ ವ್ಯತ್ಯಾಸದ ಪರಿಮಾಣಗಳ ಪರಿಷ್ಕೃತ ಅಂದಾಜಿಗೆ ಅನುಮೋದನೆ ನೀಡುವ ಕುರಿತು.**

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನ ಯಲ್ಲಾಪುರ ಗ್ರಾಮದ ಸರ್ವೆ ನಂ.128 ರಲ್ಲಿ ಒಟ್ಟು ಕ್ಷೇತ್ರ 32-32-0 ರ ಪೈಕಿ 2-0-0 ಎಕರೆ ಜಮೀನಿನಲ್ಲಿ ಕಾರ್ಮಿಕ ಸಮುದಾಯ ಭವನವನ್ನು ನಿರ್ಮಿಸಲು ದಿನಾಂಕ:01-07-2021 ರಂದು ನಡೆದ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ 91ನೇ ಸಭೆಯಲ್ಲಿ ಒಟ್ಟು ರೂ.7.74 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ನಿರ್ಣಯಿಸಿದಂತೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಕಾರ್ಮಿಕ ಕಲ್ಯಾಣ ಆಯುಕ್ತರು ಇವರ ಪತ್ರ ದಿನಾಂಕ:28-12-2021 ರಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ತಾಂತ್ರಿಕ ಸಮಿತಿಯಿಂದ ಅನುಮೋದನೆ ಪಡೆದು ಟೆಂಡರ್ ಕರೆದು ಅನುಷ್ಠಾನಗೊಳಿಸಲು ಈ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಯವರಿಗೆ ಕೋರಿರುತ್ತಾರೆ. ಸದರಿ ಕಾರ್ಮಿಕ ಸಮುದಾಯ ಭವನವು 750 ರಿಂದ 1000 ಜನ ಕೂರುವಂತಹ ಸಾಮರ್ಥ್ಯ ಹೊಂದಿರುತ್ತದೆ ಹಾಗೂ ಸದರಿ ಕಾರ್ಮಿಕ ಸಮುದಾಯ ಭವನದಿಂದ ಕಾರ್ಮಿಕರಿಗೆ ಮತ್ತು ಇವರ ಅವಲಂಭಿತರಿಗೆ ಮದುವೆ ಮತ್ತು ಇತರೆ ಸಮಾರಂಭಗಳಿಗೆ ಹಾಗೂ ವೃತ್ತಿ ಸಂಭಂದ ಕೌಶಾಲ್ಯಾಭಿವೃದ್ಧಿ ತರಭೇತಿಯನ್ನು ನೀಡಲು ಮತ್ತು ಮುಂಡಗೋಡ ತಾಲ್ಲೂಕಿನ ಇತರೆ ಸಾರ್ವಜನಿಕರಿಗೂ ಸಹ ಅನುಕೂಲವಾಗಲಿದೆ . ದಿ:03-02-2022 ರಂದು ನಡೆದ ಮಂಡಳಿಯ 35ನೇ ಸಭೆಯ ನಿರ್ಣಯದಲ್ಲಿ ತಿಳಿಸಿದಂತೆ "ಕಲ್ಯಾಣ ಆಯುಕ್ತರು, ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ನಿರ್ವಹಿಸುವ ಕಾಮಗಾರಿಗಳ ಕುರಿತಾಗಿ ತಾಂತ್ರಿಕ ಸಿಬ್ಬಂಧಿ ವಿಭಾಗದ ಕೊರತೆಯಿರುವುದರಿಂದ ಕಾರ್ಮಿಕ ಕಲ್ಯಾಣ ಮಂಡಳಿಯ ತೀರ್ಮಾನದಂತೆ ಕೆಬಿಒಸಿಡಬ್ಲ್ಯೂಡಬ್ಲ್ಯೂಬಿ ಮಂಡಳಿಯ ವತಿಯಿಂದ ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಕರೆದು ಅರ್ಹ ಸಂಸ್ಥೆಗಳಿಗೆ ಕಾರ್ಯಾದೇಶ ನೀಡಿ ಕಾಮಗಾರಿ ಮುಕ್ತಾಯಗೊಳ್ಳುವವರೆಗೂ ತಾಂತ್ರಿಕ ಸಲಹೆ ಹಾಗೂ ಅನುಷ್ಠಾನಗೊಳಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ".

ಅದರಂತೆ ಮಂಡಳಿಯಿಂದ ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಕರೆದು ಗುತ್ತಿಗೆದಾರರಾದ ಶ್ರೀ. ಎಮ್. ಕೆ. ಹೆಗ್ಡೆ ಕನ್ಸ್ಟ್ರಕ್ಷನ್ಸ್ , ಧಾರವಾಡ ರವರಿಗೆ ದಿನಾಂಕ:18-04-2022 ರಂದು ಕಾರ್ಯಾದೇಶ ನೀಡಲಾಗಿರುತ್ತದೆ. ದಿನಾಂಕ: 13/05/2022 ರಂದು ಸ್ಥಳ ಹಸ್ತಾಂತರ ನೀಡಲಾಗಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಸದರಿ ಕಾಮಗಾರಿಯ

Mark out ನೀಡುವ ಸಮಯದಲ್ಲಿ ಸ್ಥಳ ಬದಲಾವಣೆಯಾಗಿರುವುದರಿಂದ, PMC ಸಂಸ್ಥೆಯವರಾದ M/S Ruthvik Civil Infratech Pvt. Ltd. BANGALORE ರವರು ದಿನಾಂಕ:16-05-2022 ರ ಪತ್ರದಲ್ಲಿ ಸದರಿ ಕಾಮಗಾರಿ ಸ್ಥಳದಲ್ಲಿ ಲಭ್ಯವಿರುವ ಮಣ್ಣಿನ ಗುಣಧರ್ಮ , ಎಸ್.ಬಿ.ಸಿ ಪರೀಕ್ಷೆ ನಡೆಸಲಾಗಿದ್ದು As there is Variation in sub soil strata , and Net pressure obtained was 18 Tonne/$m^2$ but in the DPR it was considered 20 Tonne/$m^2$ and due to this structure has redesigned by considering the new SBC of soil 18 Tonne/$m^2$ and the Revised structural drawings are submitted for the approval , because of this quantities in the earthwork excavation , concrete quantities and steel quantities etc ಎಂಬುದಾಗಿ ವರದಿಯನ್ನು ಸಲ್ಲಿಸಿರುತ್ತಾರೆ. ಅದರಂತೆ 17-05-2022 ರಂದು ಮಂಡಳಿಯ ತಾಂತ್ರಿಕ ಸಿಬ್ಬಂದಿಯು ಸ್ಥಳ ಪರೀಶೀಲಿಸಲಾಗಿದ್ದು PMC ಸಂಸ್ಥೆಯವರು ಸಲ್ಲಸಿರುವ ವರದಿಯಂತೆ ಸ್ಥಳಕ್ಕನುಗುಣವಾಗಿ ನಿರ್ಮಿಸುವುದು ಅವಶ್ಯವಿದೆ ಎಂದು ವರದಿ ನೀಡಿರುತ್ತಾರೆ ಹಾಗೂ PMC ಸಂಸ್ಥೆಯವರು ಸದರಿ ಕಾಮಗಾರಿ ಸ್ಥಳದಲ್ಲಿ ಲಭ್ಯವಿರುವ ಮಣ್ಣಿನ ಗುಣಧರ್ಮ ,ಎಸ್.ಬಿ.ಸಿ ಗೆ ಅನುಗುಣವಾಗಿ ತಯಾರಿಸಿ ಸಲ್ಲಿಸಿರುವ ಸ್ಟ್ರಕ್ಚರಲ್ ವಿನ್ಯಾಸಗಳನ್ನು ಪರಿಶೀಲಿಸಲಾಗಿರುತ್ತದೆ ಅದರಂತೆ ಗುತ್ತಿಗೆದಾರರು ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಇದರಿಂದ ಟೆಂಡರ್ ಕರಾರಿನಲ್ಲಿರುವ BOQ ಪರಿಮಾಣಗಳು ಹೆಚ್ಚುವರಿಯಾಗುತ್ತಿದ್ದು ಹಾಗೂ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 447 ವೆಚ್ಚ-12/2022 ದಿನಾಂಕ:30-07-2022 ರನ್ವಯ ಗುತ್ತಿಗೆದಾರರಿಗೆ ಜಿಎಸ್‌ಟಿ 18% ಪಾವತಿಸಬೇಕಾಗಿರುವುದರಿಂದ ಕಾಮಗಾರಿಯ ವೆಚ್ಚವು ಅನುಮೋದಿತ ಮೊತ್ತಕ್ಕಿಂತ ರೂ. 51.58 ಲಕ್ಷಗಳು ಹೆಚ್ಚುವರಿಯಾಗುತ್ತಿರುವ ಕಾರಣ ಸದರಿ ಪರಿಷ್ಕೃತ ಅಂದಾಜು ಮೊತ್ತ ರೂ.825.58 ಲಕ್ಷಗಳನ್ನು (**ಕೋಷ್ಠಕದಂತೆ**) ಮೀರದಂತೆ ಕಾಮಗಾರಿ ನಿರ್ವಹಿಸಲು ಅನುಮೋದನೆ ನೀಡುವ ಕುರಿತು ಹಾಗೂ ಹೆಚ್ಚುವರಿ ಮೊತ್ತವನ್ನು ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ಅನುದಾನವನ್ನು ಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸುವ ಕುರಿತು ಸಭೆಯ ಅವಗಾಹನೆಗೆ ಹಾಗೂ ಸಭೆಯ ನಿರ್ಣಯಕ್ಕೆ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ಕೋಷ್ಠಕ**

| | ವಿವರಗಳು | ಅನುಮೋದಿತ ಅಂದಾಜು ಮೊತ್ತ ರೂ. ಗಳಲ್ಲಿ | ಪರಿಷ್ಕೃತ ಅಂದಾಜು ಮೊತ್ತ ರೂ. ಗಳಲ್ಲಿ |
|---|---|---|---|
| 1 | ESTIMATION - COST OF CIVIL WORK | 652,12,219.00 | 6,90,65,307.00 |
| 2 | CONTRACTOR GST | (12%) 78,25,466.00 | (18%) 1,24,31,755.00 |
| 3 | THIRD PARTY 0.62% | 6,33,052.00 | 4,28,205.00 |
| 4 | DPR0.86% | 6,33,052.00 | 6,32,757.00 |
| 5 | CONTINGENCIES AND MISCELLANEOUS CHARGES | 30,96,211.00 | - |
| 6 | Total Amount in Rs, | 774,00,000.00 | 8,25,58,024.00 |

**ನಿರ್ಣಯ:** ಈ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿದಂತೆ, ಸದರಿ ಕಾರ್ಮಿಕ ಸಮುದಾಯ ಭವನದಿಂದ ಕಾರ್ಮಿಕರಿಗೆ ಮತ್ತು ಇವರ ಅವಲಂಭಿತರಿಗೆ ಮದುವೆ ಮತ್ತು ಇತರೆ ಸಮಾರಂಭಗಳಿಗೆ ಹಾಗೂ ವೃತ್ತಿ ಸಂಭಂದ ಕೌಶಾಲ್ಯಾಭಿವೃದ್ಧಿ ತರಭೇತಿಯನ್ನು ನೀಡಲು ಅನುಕೂಲವಾಗಲಿರುವ ಹಿತದೃಷ್ಟಿಯಿಂದ ಸದರಿ ಸಮುದಾಯ ಭವನವನ್ನು ಪೂರ್ಣಗೊಳಿಸುವುದು ಅತ್ಯವಶ್ಯವಿರುವುದರಿಂದ, ಮಂಡಳಿಯ ವಿವರವಾದ ತಾಂತ್ರಿಕ ವರದಿಯಂತೆ ಕಾಮಗಾರಿಯ ವೆಚ್ಚವು ಅನುಮೋದಿತ ಮೊತ್ತಕ್ಕಿಂತ ರೂ. 51.58 ಲಕ್ಷಗಳು ಹೆಚ್ಚುವರಿಯಾಗುತ್ತಿದ್ದು, ಪರಿಷ್ಕೃತ ಅಂದಾಜು ಮೊತ್ತ ರೂ.825.58 ಲಕ್ಷಗಳನ್ನು ಮೀರದಂತೆ ಕಾಮಗಾರಿ ನಿರ್ವಹಿಸಲು ಅನುಮೋದನೆ ನೀಡಿ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು ಹಾಗೂ ಹೆಚ್ಚುವರಿ ಮೊತ್ತವನ್ನು ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ಅನುದಾನವನ್ನು ಪಡೆದುಕೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

- **ಮಂಡಳಿಯ ನೋಂದಾಯಿತ ಕಾರ್ಮಿಕರ ಅರ್ಹ ಮಕ್ಕಳಿಗೆ (09 ರಿಂದ 12ನೇ ತರಗತಿಯವರೆಗೆ) ಶಾಲಾ ಕಿಟ್‌ಗಳನ್ನು ವಿತರಿಸಲು ಕಾರ್ಯಾದೇಶ ಪಡೆದಿರುವ ಸಂಸ್ಥೆಗಳು ಪೂರೈಕೆ ಅವಧಿಯನ್ನು ವಿಸ್ತರಿಸುವಂತೆ ಕೋರಿರುವ ಕುರಿತು.**

2021-22ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ಅನುಮೋದಿಸಿದಂತೆ ನೋಂದಾಯಿತ ಕಟ್ಟಡ ಕಾರ್ಮಿಕರ 09 ರಿಂದ 12ನೇ ತರಗತಿಯ ಮಕ್ಕಳಿಗೆ ಶಾಲಾ ಕಿಟ್‌ಗಳನ್ನು ಪೂರೈಕೆ ಮಾಡಲು ಇ-ಟೆಂಡರ್ ಮೂಲಕ ಬೆಂಗಳೂರು ಪ್ರಾದೇಶಿಕ-01ರ ವ್ಯಾಪ್ತಿಗೆ ಮೆ॥ ಆರೋಗ ಮೆಡಿಲೈನ್ಸ್ ಪ್ರೈ. ಲಿ. ಸಂಸ್ಥೆ ಮತ್ತು ಬೆಂಗಳೂರು ಪ್ರಾದೇಶಿಕ-02ರ ವ್ಯಾಪ್ತಿಯಲ್ಲಿ ಮೆ॥ ವ್ಯಾರೈಟಿ ವ್ಯಾಪಾರ್ ಪ್ರೈ. ಲಿ. ಸಂಸ್ಥೆ ಆಯ್ಕೆಯಾಗಿದ್ದು, ಇವರುಗಳಿಗೆ ಕಾರ್ಯಾದೇಶ ನೀಡಲಾಗಿತ್ತು. ಆ ಸಂದರ್ಭದಲ್ಲಿ 15 ದಿನದೊಳಗಾಗಿ ಪೂರೈಸಲು ಷರತ್ತು ವಿಧಿಸಲಾಗಿರುತ್ತದೆ. ಆದರೆ, ಸಾಮಾಗ್ರಿಗಳ ಪರಿಶೀಲನೆ ಮತ್ತು ಅನುಮೋದನೆ ಪಡೆಯುವಲ್ಲಿ ವಿಳಂಬವಾದ್ದರಿಂದ ಹಾಗೂ ವಿಧಾನ ಸಭಾ ನೀತಿ ಸಂಹಿತೆ ಜಾರಿಯಾಗುವ ಸಂಭವ ಇರುವುದರಿಂದ ಕಾರ್ಮಿಕ ಅಧಿಕಾರಿಗಳು ಕಿಟ್‌ಗಳನ್ನು ಸ್ವೀಕರಿಸಲು ತಡವಾಗುತ್ತಿರುವುದರಿಂದ ಪೂರೈಕೆ ಅವಧಿಯನ್ನು ವಿಸ್ತರಿಸುವಂತೆ ಕೋರಿರುವ ವಿಷಯವನ್ನು ಸಭೆಯು ಚರ್ಚಿಸಲಾಯಿತು.

**ನಿರ್ಣಯ:** ನೋಂದಾಯಿತ ಕಟ್ಟಡ ಕಾರ್ಮಿಕರ 09 ರಿಂದ 12ನೇ ತರಗತಿಯ ಮಕ್ಕಳಿಗೆ ಶಾಲಾ ಕಿಟ್‌ಗಳನ್ನು ಸರಬರಾಜು ಮಾಡಲು ಬೆಂಗಳೂರು ಪ್ರಾದೇಶಿಕ-01ರ ವ್ಯಾಪ್ತಿಯಲ್ಲಿ ಮೆ॥ ಆರೋಗ ಮೆಡಿಲೈನ್ಸ್ ಪ್ರೈ. ಲಿ. ಸಂಸ್ಥೆ ಮತ್ತು ಬೆಂಗಳೂರು ಪ್ರಾದೇಶಿಕ-02ರ ವ್ಯಾಪ್ತಿಯಲ್ಲಿ ಮೆ॥ ವ್ಯಾರೈಟಿ ವ್ಯಾಪಾರ್ ಪ್ರೈ. ಲಿ. ಸಂಸ್ಥೆಗೆ ನೀಡಿರುವ ಪೂರೈಕೆ ಅವಧಿಯನ್ನು ವಿಸ್ತರಿಸಲು ನಮೂದಿಸಿರುವ ಅಂಶಗಳನ್ನು ಪರಿಗಣಿಸಿ ದಿನಾಂಕ:31-05-2023ರವರೆಗೆ ಪೂರೈಕೆ ಅವಧಿಯನ್ನು ವಿಸ್ತರಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

- **ಕಾರ್ಮಿಕ ಅಧಿಕಾರಿ, ಚಾಮರಾಜನಗರ ಮತ್ತು ಮೈಸೂರು ಇವರ ವ್ಯಾಪ್ತಿಯಲ್ಲಿ ಪ್ರೀವೆಂಟಿವ್ ಹೆಲ್ತ್‌ಕೇರ್ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಸಂಸ್ಥೆಗಳು ಯೋಜನಾವಧಿಯನ್ನು ವಿಸ್ತರಿಸುವಂತೆ ಕೋರಿರುವ ಕುರಿತು.**

ಕಾರ್ಮಿಕ ಅಧಿಕಾರಿ, ಚಾಮರಾಜನಗರ ಮತ್ತು ಮೈಸೂರು ಇವರ ವ್ಯಾಪ್ತಿಯಲ್ಲಿನ ನೋಂದಾಯಿತ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಪ್ರೀವೆಂಟಿವ್ ಹೆಲ್ತ್‌ಕೇರ್ ಯೋಜನೆಯಡಿ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಲು ಮೆ॥ ಕ್ಲಿಯರ್ ಮೆಡಿ ಹೆಲ್ತ್‌ಕೇರ್ ಪ್ರೈ. ಲಿ. ಸಂಸ್ಥೆಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಆ ಸಂದರ್ಭದಲ್ಲಿ ಎರಡು ತಿಂಗಳೊಳಗಾಗಿ ಯೋಜನೆಯನ್ನು ಪೂರ್ಣಗೊಳಿಸಲು ಷರತ್ತು ವಿಧಿಸಲಾಗಿರುತ್ತದೆ. ಆದರೆ, ಸಂಸ್ಥೆಯವರು ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ ಪರೀಕ್ಷೆಗಳಿರುವುದರಿಂದ, ಹಳ್ಳಿಗಳಲ್ಲಿ ಈ ಸಮಯದಲ್ಲಿ ಜಾತ್ರೆಗಳು ನಡೆಯುವುದರಿಂದ ಮತ್ತು ವಿಧಾನಸಭಾ ಚುನಾವಣೆ ಹತ್ತಿರವಿರುವುದರಿಂದ ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಸಿಕೊಳ್ಳಲು ಅರ್ಹ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯದ ಕಾರಣ ಯೋಜನಾವಧಿಯನ್ನು ವಿಸ್ತರಿಸುವಂತೆ ಕೋರಿರುತ್ತಾರೆ. ಈ ವಿಷಯವನ್ನು ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು.

ನಿರ್ಣಯ: ಕಾರ್ಮಿಕ ಅಧಿಕಾರಿ, ಚಾಮರಾಜನಗರ ಮತ್ತು ಮೈಸೂರು ಇವರ ವ್ಯಾಪ್ತಿಯಲ್ಲಿ ಪ್ರೀವೆಂಟಿವ್ ಹೆಲ್ತ್‌ಕೇರ್ ಯೋಜನೆಯನ್ನು ಅನುಷ್ಠಾನಗೊಳಿಸಲು ನಿಗಧಿಪಡಿಸಿರುವ ಅವಧಿಯನ್ನು ವಿಸ್ತರಿಸಲು ಕೋರಿರುವ ಕಾರಣಗಳನ್ನು ಪರಿಗಣಿಸಿ ದಿನಾಂಕ:31-05-2023ರವರೆಗೆ ಯೋಜನಾವಧಿಯನ್ನು ವಿಸ್ತರಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

- **ಶ್ರೀ ಕೊಂಡನ್ ಸಿ ಬಿನ್ ಚಿನ್ನದೊರೆರವರ ಪ್ರಮುಖ ವೈದ್ಯಕೀಯ ವೆಚ್ಚ ಮರುಪಾವತಿ ಕೋರಿರುವ ಕುರಿತು.**

ಶ್ರೀ ಕೊಂಡನ್ ಸಿ ಬಿನ್ ಚಿನ್ನದೊರೆ ಇವರು ನೋಂದಾಯಿತ ಕಟ್ಟಡ ಕಾರ್ಮಿಕರಾಗಿದ್ದು, ದಿನಾಂಕ:19-06-2022ರಂದು ಹಾವು ಕಚ್ಚಿರುವುದಕ್ಕೆ ಬಂಗಾರಪೇಟೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗೆ "ಸಿಲಿಕಾನ್ ಸಿಟಿ, ಹೊಸಕೋಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ರೂ.44,018/-ಗಳಾಗಿರುವುದಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಆಸ್ಪತ್ರೆಯು ಸರ್ಕಾರದಿಂದ ಮಾನ್ಯತೆ ಪಡೆಯದ ಆಸ್ಪತ್ರೆಯಾಗಿದ್ದು, ತುರ್ತು ಚಿಕಿತ್ಸೆಗಾಗಿ ಆ ಆಸ್ಪತ್ರೆಗೆ ದಾಖಲಾಗಿರುವುದಾಗಿ, ಖರ್ಚಾದ ವೈದ್ಯಕೀಯ ಧನಸಹಾಯ ಮಂಜೂರು ಮಾಡುವಂತೆ ಕೋರಿದ್ದು, ಈ ವಿಷಯದ ಕುರಿತು ಸಭೆಯು ಚರ್ಚಿಸಿ ಚಿಕಿತ್ಸೆಯ ತುರ್ತು ಅಗತ್ಯತೆಯನನು ಪರಿಗಣಿಸಿ ಸದರಿಯವರಿಗೆ ರೂ.44,018/-ಗಳ ವೈದ್ಯಕೀಯ ಧನಸಹಾಯವನ್ನು ಮಂಜೂರು ಮಾಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

- **ಶ್ರೀಮತಿ ಲಕ್ಷ್ಮೀರವರಿಗೆ ಕುಟುಂಬ ಪಿಂಚಣಿ ಸೌಲಭ್ಯ ಮಂಜೂರು ಮಾಡುವ ಕುರಿತು.**

ನೋಂದಾಯಿತ ಕಟ್ಟಡ ಕಾರ್ಮಿಕರಾಗಿದ್ದ ದಿವಂಗತ ಆಂಜಿನಪ್ಪರವರು ಪಿಂಚಣಿ ಧನಸಹಾಯ ಕೋರಿ ದಿನಾಂಕ:18-01-2022ರಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ದಿನಾಂಕ:28-03-2022ರಂದು ಹಿರಿಯ ಕಾರ್ಮಿಕ ನಿರೀಕ್ಷಕರು 26ನೇ ವೃತ್ತ, ಬೆಂಗಳೂರುರವರು ಸ್ಥಳಾ ಪರಿಶೀಲನೆ ಮಾಡಿ ಅರ್ಜಿಯನ್ನು ಮಂಜೂರು ಮಾಡಬಹುದು ಎಂದು ಶಿಫಾರಸ್ಸುನೊಂದಿಗೆ ಮಂಜೂರಾತಿ ಅಧಿಕಾರಿ ರವರ ಕಛೇರಿಗೆ ವರ್ಗಾಯಿಸಿರುತ್ತಾರೆ. ಆದರೆ ದಿವಂಗತ ಆಂಜಿನಪ್ಪರವರು ದಿನಾಂಕ:27-

03-2022ರಂದು ಮರಣ ಹೊಂದಿರುವುದರಿಂದ ಸದರಿ ಪಿಂಚಣಿ ಧನಸಹಾಯದ ಅರ್ಜಿಯನನು ತಿರಸ್ಕರಿಸಲಾಗಿರುತ್ತದೆ.

ಮುಂದುವರೆದು, ಅವರ ಪತ್ನಿಯಾದ ಶ್ರೀಮತಿ ಲಕ್ಷ್ಮೀರವರು ಕುಟುಂಬ ಪಿಂಚಣಿ ಸೌಲಭ್ಯ ಮಂಜೂರು ಮಾಡುವಂತೆ ಕೋರಿರುವುದರಿಂದ, ಕಾಯ್ದೆಯಡಿ ಕುಟುಂಬ ಪಿಂಚಣಿ ಮಂಜೂರು ಮಾಡಲು ಫಲಾನುಭವಿಯು ಪಿಂಚಣಿ ಸೌಲಭ್ಯ ಮಂಜೂರಾಗಿರಬೇಕೆಂಬ ನಿಯಮವಿರುವುದರಿಂದ, ಈ ವಿಷಯದ ಕುರಿತು ಸಭೆಯು ಸುದೀರ್ಘವಾಗಿ ಚರ್ಚಿಸಿ ಫಲಾನುಭವಿಯು ಪಿಂಚಣಿ ಕೋರಿ ಅರ್ಜಿ ಸಲ್ಲಿಸಿರುವುದನ್ನು ಪರಿಗಣಿಸಿ ಅವರ ಪತ್ನಿಯಾದ ಶ್ರೀಮತಿ ಲಕ್ಷ್ಮೀರವರಿಗೆ ಕುಟುಂಬ ಪಿಂಚಣಿ ಸೌಲಭ್ಯ ಮಂಜೂರು ಮಾಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

➢ **ಶ್ರೀ. ಚಿಕ್ಕಪ್ಪ, ಲೆಕ್ಕಾಧಿಕಾರಿ (ನಿವೃತ) , ಕರ್ನಾಟಕ ಸ್ಟೇಟ್ ಆಕೌಂಟ್ಸ್ ಇಲಾಖೆ ಇವರನ್ನು ಲೆಕ್ಕ ಶಾಖೆಯ ಡೆಸ್ಕ್ ಆಫೀಸರ್ (ಅಕೌಂಟ್ಸ್ & ಆಡಿಟ್) ಹುದ್ದೆಗೆ ನೇಮಿಸಿಕೊಳ್ಳುವ ಕುರಿತು.**

ಪ್ರಸ್ತುತ ಮಂಡಳಿಯ ಲೆಕ್ಕ ಶಾಶೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚಿನ ಕೆಲಸದ ಒತ್ತಡ ಬರುತ್ತಿದ್ದು, ಸದರಿ ಕೆಲಸಗಳನ್ನು ನಿಭಾಯಿಸಲು ಕರ್ನಾಟಕ ಸ್ಟೇಟ್ ಆಕೌಂಟ್ಸ್ ನಿಂದ ಒರ್ವ ನಿವೃತ ಅಧಿಕಾರಿಯನ್ನು ನೇಮಿಸಿಕೊಳ್ಳುವ ಕುರಿತು ಸಭೆಯಲ್ಲಿ ಪ್ರಸ್ತಾಪಿಸಲಾಯಿತು, ಈ ಕುರಿತು ಸುದೀರ್ಘವಾಗಿ ಚರ್ಚಿಸಿದಾಗ, ಪ್ರಸ್ತುತ ಮಂಡಳಿಯಲ್ಲಿ ಡೆಸ್ಕ್ ಆಫೀಸರ್ (ಅಕೌಂಟ್ಸ್ & ಆಡಿಟ್) ಆಗಿ ಕೆಲಸ ನಿರ್ವಹಿಸುತ್ತಿರುವ ಶ್ರೀ. ರುದ್ರಪ್ಪ ಇವರ ಬದಲಿಗೆ ಶ್ರೀ. ಚಿಕ್ಕಪ್ಪ, ಲೆಕ್ಕಾಧಿಕಾರಿ (ನಿವೃತ್ತ), ಕರ್ನಾಟಕ ಸ್ಟೇಟ್ ಆಕೌಂಟ್ಸ್ ಇಲಾಖೆ ಇವರನ್ನು ನೇಮಿಸಿಕೊಳ್ಳುವ ಕುರಿತು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

➢ **ರಮೇಶ್ ಬಿನ್ ಪಿಡ್ಡಯ್ಯರವರ ಅಂತ್ಯ ಸಂಸ್ಕಾರ ಸಹಾಯಧನ ಮಂಜೂರು ಮಾಡುವ ಕುರಿತು.**

ದಿವಂಗತ ರಮೇಶ್ ಬಿನ್ ಪಿಡ್ಡಯ್ಯರವರು ನೋಂದಾಯಿತ ಕಟ್ಟಡ ಕಾರ್ಮಿಕರಾಗಿದ್ದು, ದಿನಾಂಕ: 28-03-2021ರಂದು ಮರಣಹೊಂದಿರುವುದರಿಂದ ಅವರ ನಾಮನಿರ್ದೇಶಿತರಾದ ಶ್ರೀಮತಿ ರೂಪರವರಿಗೆ ಪತಿಯ ಮರಣದ ಅಘಾತದಿಂದ ಅರೆ ಪ್ರಜ್ಞೆಯಿಂದಾಗಿ ನಿಯಮ-49(ಸಿ)ರಲ್ಲಿ ಅರ್ಜಿ ಸಲ್ಲಿಕೆಯ ನಿಗದಿಪಡಿಸಿದ ಕಾಲಮಿತಿಯನ್ನು ಮೀರಿ, ಮರಣ ಪರಿಹಾರ ಕೋರಿ ದಿನಾಂಕ:14-10-2022ರಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ಮಂಜೂರಾತಿ ಅಧಿಕಾರಿಗಳು ನಿಯಮಾನುಸಾರ ತಿರಸ್ಕರಿಸಲಾಗಿರುತ್ತದೆ.

ಆದರೆ, ಪ್ರಧಾನ ಕಾರ್ಯದರ್ಶಿ, ಶ್ರೀ ಬಿ ಕೃಷ್ಣಪ್ಪ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ(ರಿ), ಟಿ ನರಸೀಪುರರವರು ಮೃತ ಫಲಾನುಭವಿಯ ಪತ್ನಿಯಾದ ಶ್ರೀಮತಿ ರೂಪರವರು ಪತಿಯ ಮರಣದ ಅಘಾತದಿಂದ ಅರೆ ಪ್ರಜ್ಞೆಯಲ್ಲಿ ಇದ್ದ ಕಾರಣ ಹಾಗೂ ಅಪ್ರಾಪ್ತ ವಯಸ್ಸಿನ ಎರಡು ಮಕ್ಕಳಿದ್ದು, ಅವರ ವಿದ್ಯಾಭ್ಯಾಸ ಮತ್ತು ಜೀವನ ನಿರ್ವಹಣೆಗಾಗಿ ಮಾನವೀಯತೆ ದೃಷ್ಠಿಯಿಂದ ಅಂತ್ಯ ಸಂಸ್ಕಾರ ಸಹಾಯಧನ ಮಂಜೂರು ಮಾಡುವಂತೆ ಕೋರಿದ್ದು, ಈ ವಿಷಯದ ಕುರಿತು ಸಭೆಯು ಸುದೀರ್ಘವಾಗಿ ಚರ್ಚಿಸಿ ಮಾನವೀಯತೆ ದೃಷ್ಠಿಯಿಂದ ಮರಣ ಧನಸಹಾಯ ಮತ್ತು ಅನುಗ್ರಹರಾಶಿ ಮಂಜೂರು ಮಾಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

- **ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರಿಗೆ ಕಾರ್ಮಿಕ ಗೃಹ ಭಾಗ್ಯ ಸೌಲಭ್ಯದಡಿ ಬಿಡುಗಡೆ ಮಾಡಿರುವ ಜಿಲ್ಲಾವಾರು ಅನುದಾನವನ್ನು ಮರುಹೊಂದಾಣಿಕೆ ಮಾಡಿಕೊಳ್ಳಲು ಅನುಮೋದನೆ ಕೋರಿರುವ ಕುರಿತು**

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರಿಗೆ ಕಾರ್ಮಿಕ ಗೃಹ ಭಾಗ್ಯ ಸೌಲಭ್ಯದಡಿ ಒಟ್ಟಾರೆಯಾಗಿ ರೂ.433.80 ಕೋಟಿ ಮೊತ್ತವನ್ನು ಜಿಲ್ಲಾವಾರು ಬಿಡುಗಡೆ ಮಾಡಲಾಗಿತ್ತು. ಈ ಸಂಬಂಧ ಕೆಲವು ಜಿಲ್ಲೆಯಲ್ಲಿ ಯೋಜನೆಯ ಫಲಾನುಭವಿಗಳು ಅವರೇ ಸ್ವಂತವಾಗಿ ಭಾಗಶಃ ಫಲಾನುಭವಿ ವಂತಿಕೆಯನ್ನು ಪಾವತಿಸುತ್ತಿರುವುದರಿಂದ ಪೂರ್ಣ ಪ್ರಮಾಣದ ಸಾಲದ ಅವಶ್ಯಕತೆ ಕಂಡುಬರುತ್ತಿಲ್ಲ. ಹಾಗಾಗೀ, ಜಿಲ್ಲಾವಾರು/ ಯೋಜನಾವಾರು ಮಾರ್ಪಾಡು ಪ್ರಸ್ತಾವನೆಗೆ ಅನುಮೋದನೆ ನೀಡುವಂತೆ ಕೋರಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ಸುಧೀರ್ಘವಾಗಿ ಚರ್ಚಿಸಲಾಗಿ ಮಂಡಳಿಯಿಂದ ನೀಡಲಾಗುವ ಅನುದಾನಕ್ಕೆ ಸಂಬಂಧಿಸಿದಂತೆ ನಿಖರವಾದ ಫಲಾನುಭವಿಗಳ ವಿವರ ಹಾಗೂ ಅವರಿಗೆ ನೀಡಲಾಗಿರುವ ಸಾಲದ ಮೊತ್ತದ ಸ್ಪಷ್ಟ ಮಾಹಿತಿಯು ಮಂಡಳಿಯಲ್ಲಿ ನಿರ್ವಹಿಸತಕ್ಕದ್ದೆಂದು ಸದಸ್ಯರು ಅಭಿಪ್ರಾಯಪಟ್ಟಿರುತ್ತಾರೆ. ಈ ಹಿನ್ನೆಲೆಯಲ್ಲಿ ಮಂಡಳಿಯಿಂದ ಈಗಾಗಲೇ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಿರುವ ಅನುದಾನದಡಿ ಕಾರ್ಮಿಕ ಗೃಹ ಭಾಗ್ಯ ಸೌಲಭ್ಯ ಪಡೆದ ಫಲಾನುಭವಿಗಳ ಸಂಪೂರ್ಣ ವಿವರ ಮತ್ತು ಅವರಿಗೆ ಬಿಡುಗಡೆ ಮಾಡಿದ ಸಾಲದ ಮೊತ್ತದ ವಿವರಗಳನ್ನು ಮಂಡಳಿಗೆ ಒದಗಿಸುವ ಮತ್ತು ಈಗಾಗಲೇ ವಿಧಿಸಿರುವ ಇತರೆ ಎಲ್ಲಾ ಷರತ್ತುಗಳನ್ನು ಪಾಲಿಸುವ ಷರತ್ತಿಗೆ ಒಳಪಟ್ಟು ಜಿಲ್ಲಾವಾರು ಮರುಹೊಂದಾಣಿಕೆ ಮಾಡಿಕೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

- **ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ನಿಯಮಗಳಡಿ ಸೌಲಭ್ಯಗಳನ್ನು ನೀಡಲಾಗುತ್ತಿದ್ದು, ಈ ಕೆಳಕಂಡ ಪ್ರಕರಣಗಳಲ್ಲಿ ನಿಯಾಮಾನುಸಾರ ಸೌಲಭ್ಯಗಳನ್ನು ಮಂಜೂರು ಮಾಡಲು ಸಭೆಯು ಅನುಮೋದನೆ ನೀಡಿತು.**

| ಕ್ರಮ ಸಂ. | ಫಲಾನುಭವಿಯ ವಿವರ | ಸೌಲಭ್ಯ |
|---|---|---|
| 01 | ತುಕಾರಾಮ ನಾವು ಪೋಲೆ, ನಂ.371, ಸಾತಿಕಟ್ಟೆ, ಕಂಚನಹಳ್ಳಿ, ಯಲ್ಲಾಪುರ.(ತಾ) ಉತ್ತರ ಕನ್ನಡ ಜಿಲ್ಲೆ | ಮದುವೆ ಧನಸಹಾಯಕ್ಕಾಗಿ |
| 02 | ತಮ್ಮಣ್ಣ ಮರಾಠಿ, ನಂ. 100 ಕಣ್ಣಿಗೇರಿ. ಯಲ್ಲಾಪುರ.(ತಾ) ಉತ್ತರ ಕನ್ನಡ ಜಿಲ್ಲೆ | ಶೈಕ್ಷಣಿಕ ಧನಸಹಾಯ |

**ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಸಭೆಯಲ್ಲಿ ಹಾಜರಿದ್ದ ಮಂಡಳಿಯ ಅಧ್ಯಕ್ಷರು, ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳಿಗೆ ವಂದನಾರ್ಪಣೆ ಸಲ್ಲಿಸುವ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು,
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ
ಕಾರ್ಮಿಕರ ಕಲ್ಯಾಣ ಮಂಡಳಿ,
ಬೆಂಗಳೂರು